ಶೆಣೈ ಕಾರ್ಯಕ್ರಮ ನಿರ್ವಹಿಸಿದರು.

# ಪದವಿ ಜೀವನದಲ್ಲೇ ಭವಿಷ್ಯದ ಬಗ್ಗೆ ಗುರಿಯಿರಿಸಿ: ಜ್ಯೋತಿ

## ಮಂಜುನಾಥ ಪೈ ಸ್ಮಾರಕ ಸ.ಪ್ರ.ದ. ಕಾಲೇಜು ವಿದ್ಯಾರ್ಥಿ ವೇದಿಕೆ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಸಮಾರಂಭ

**ಕಾರ್ಕಳ:** ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಸಾಲಿನ ವಿದ್ಯಾರ್ಥಿ ವೇದಿಕೆ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಿತು.

ಮಣಿಪಾಲಇನ್ನರ್‌ಲೈಟ್‌ವೆಲ್‌ನೆಸ್ ಸೆಂಟರ್‌ನಹಿಪ್ನೋಥೆರೆಪಿಸ್ಟ್, ಕವಯಿತ್ರಿ ಜ್ಯೋತಿ ಮಹದೇವ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಪದವಿ ಜೀವನದಲ್ಲಿ ಭವಿಷ್ಯದ ಬಗ್ಗೆ ಗುರಿಯಿರಿಸಿ ತಮ್ಮ ವೈಬ್ರೆಂಟ್ ಎನರ್ಜಿಯನ್ನು ಉಪಯೋಗಿಸಿದರೆ ಸಾರ್ಥಕವಾಗುತ್ತದೆ. ಮುಂದೆ ಗುರಿ, ಹಿಂದೆ ಗುರು ಇದ್ದಾಗ ಸಾಧನೆ ಸಾಧ್ಯ. ವಿದ್ಯಾರ್ಥಿಗಳಿಗೆ ಈ ಪ್ರಾಯದಲ್ಲಿ ವಿವಿಧ ರೀತಿಯಲ್ಲಿ ಬೇರೆ ಬೇರೆ ಕಡೆಗೆ ಗಮನ ಹರಿಯುತ್ತದೆ. ಆದರೆ ಸ್ಪಷ್ಟ ಗುರಿಯಿದ್ದು, ಸಿಗುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದರು.



ಮಣಿಪಾಲ ಇನ್ನರ್‌ಲೈಟ್ ವೆಲ್‌ನೆಸ್ ಸೆಂಟರ್‌ನ ಹಿಪ್ನೋಥೆರೆಪಿಸ್ಟ್, ಕವಯಿತ್ರಿ ಜ್ಯೋತಿ ಮಹದೇವ ಕಾರ್ಯಕ್ರಮ ಉದ್ಘಾಟಿಸಿದರು.

**ದುಶ್ಚಟಗಳಿಗೆ ಬಲಿಯಾಗದಿರಿ:** ಕಾರ್ಕಳ ಉಪ ವಿಭಾಗದ ಎಸಿಪಿ ಪಿ. ಕೃಷ್ಣಕಾಂತ್ ಐಪಿಎಸ್ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ನಾನು ಕೆಲಸ ಮಾಡಿ ಪೊಲೀಸ್ ವಿಭಾಗ ಸೇರಿದ್ದೇನೆ. ವಿದ್ಯಾರ್ಥಿಗಳಿಗೆ ತುಂಬ ಅವಕಾಶಗಳು ಸಿಗುತ್ತವೆ. ಅವುಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ಡ್ರಗ್ಸ್, ಸಿಗರೇಟು, ಕುಡಿತದಂತಹ ದುಶ್ಚಟಗಳಿಗೆ ಬಲಿಯಾಗದಿರಿ. ಅಂತಹದ್ದು ಏನಾದರು ಕಂಡು ಬಂದಲ್ಲಿ ಪೊಲೀಸರಿಗೆ ಮಾಹಿತಿ ನೀಡಿ. ಯುವ ಜನತೆಯನ್ನು ದೇಶದ ಆಸ್ತಿಯನ್ನಾಗಿ ರೂಪಿಸಬೇಕೇ ಹೊರತು ದುಷ್ಟಶಕ್ತಿಯಾಗಿ ಅಲ್ಲ. ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುವ ಮೊಬೈಲ್ ಬಳಕೆಯನ್ನು ಮನೆಯಲ್ಲಿ ಪೋಷಕರು ಗಮನಿಸಬೇಕು. ಸಾಮಾಜಿಕ ನೆಟ್‌ವರ್ಕ್‌ಗಳಲ್ಲಿ ಸಮಯ ವ್ಯಯಿಸಿ, ಜೀವನ ಹಾಳು ಮಾಡಿಕೊಳ್ಳಬೇಡಿ. ಪೋಷಕರು ಮಕ್ಕಳನ್ನು ಗಮನಿಸಿ ಸೂಕ್ತ ಸಲಹೆಗಳನ್ನು ನೀಡಬೇಕು. ನಾಗರಿಕರಿಗೆ ಸಹಾಯ ನೀಡುವಲ್ಲಿ ನಿಮ್ಮ ಜೊತೆ ನಾವೂ ಇರುತ್ತೇವೆ ಎಂದರು.

ಪ್ರಾಂಶುಪಾಲ ಪ್ರೊ. ಶ್ರೀವರ್ಮ ಅಜ್ರಿ ಎಂ. ಅಧ್ಯಕ್ಷತೆವಹಿಸಿದ್ದರು. ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂಸಿದರು. ಶೈಕ್ಷಣಿಕವಾಗಿ ಸಾಧನೆ ಮಾಡಿದ, ಕ್ರೀಡಾ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಹಾಗೂ ಇತ್ತೀಚೆಗೆ ಸಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಕಾಲೇಜಿನ ಪೂರ್ವ ವಿದ್ಯಾರ್ಥಿ ಸಚಿನ್ ರಾಜ್ ಅವರನ್ನು ಅಭಿನಂದಿಸಲಾಯಿತು.

ವಿದ್ಯಾರ್ಥಿ ವೇದಿಕೆ ನಾಯಕ ವೆನ್ಸಿಲ್ ಅಗೇರಾ ಸ್ವಾಗತಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಯೋಗೇಶ್ ಡಿ.ಎಚ್. ವಿದ್ಯಾರ್ಥಿ ನಾಯಕರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಉಪನ್ಯಾಸಕಿ ಜ್ಯೋತಿ ಎಲ್. ಜನ್ನೆ ಶೈಕ್ಷಣಿಕ ಪುರಸ್ಕಾರ ಕಾರ್ಯಕ್ರಮ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಕೃಷ್ಣಮೂರ್ತಿ ವೈದ್ಯ ಕ್ರೀಡಾ ವಿಭಾಗದ ಪುರಸ್ಕಾರ ಕಾರ್ಯಕ್ರಮ ನಿರೂಪಿಸಿದರು. ಅಂತಿಮ ಬಿ.ಕಾಂ. ನ ಶರಣ್ಯ ಹಾಗೂ ಮನಿಷ್ ಕಾರ್ಯಕ್ರಮ ನಿರೂಪಿಸಿದರು. ಶಬರಿ ವಂದಿಸಿದರು.

ಪ್ರಕೃತಿಯನ್ನು ಉಳಿಸಿ-ಬೆಳೆಸಿ ಎಂಬ ಧ್ಯೇಯದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಅತಿಥಿಗಳಿಗೆ ಸ್ಮರಣಿಕೆಯಾಗಿ ಗಿಡಗಳನ್ನು ನೀಡಲಾಯಿತು. ಅತಿಥಿಗಳು ಸ್ಮರಣಿಕೆ ಪಡೆದ ಗಿಡಗಳನ್ನು ಕಾಲೇಜು ಆವರಣದಲ್ಲಿಯೇ ನೆಟ್ಟು ಪ್ರಕೃತಿ ಪ್ರೇಮ ಮೆರೆದರು.

ಜಯದಿಂದ ಮುನ್ನುಗ್ಗಿ